**ಅ.ದಾ. ಸಂ. 8/2019 PW-1**

**<u>ದಿನಾಂಕಃ 27.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು ವಾದಿ ಪರ ಶ್ರೀ.ಎಲ್.ಎ. ವಕೀಲರಿಂದಃ-</u>

1) ಕಾಶೀ ಮೋಟಾ ಎಂದರೆ ನಮ್ಮ ತಾತ. ತಿಮ್ಮಾಬೋವಿ ನನ್ನ ತಂದೆ. ದಿಃ02.04.1964 ರಂದು ನಮ್ಮ ತಂದೆ 1 ನೇ ಪ್ರತಿವಾದಿಯ ತಂದೆ ಕರೀಗೌಡರಿಗೆ ಸರ್ವೆ ನಂ.81/2 ರಲ್ಲಿ 7 ಗುಂಟೆಯನ್ನು ನೋಂದಾಯಿತ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ ದಿಃ 04.01.1964 ರಲ್ಲಿ ಸರ್ವೆ ನಂ.81/2 ರಲ್ಲಿ 17 ಗುಂಟೆಯನ್ನು 1 ನೇ ಪ್ರತಿವಾದಿಯ ತಂದೆ ಕರೀಗೌಡರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ಕ್ರಯಕ್ಕೆ ಪಡೆದ ನಂತರ 1 ನೇ ಪ್ರತಿವಾದಿಯ ತಂದೆ ಅವರ ಹೆಸರಿಗೆ ಸ್ವತ್ತಿನ ಖಾತೆ ಮಾಡಿಸಿಕೊಂಡಿರಲಿಲ್ಲ ಎಂದರೆ ಸರಿ. ನಮ್ಮ ತಂದೆಯ ಹೆಸರಿನಲ್ಲಿಯೇ ಪೌತಿ ಖಾತೆ ಮುಂದುವರೆಯುತ್ತಿತ್ತು ಎಂದರೆ ಸರಿ. ನಮ್ಮ ತಂದೆಯ ಮರಣಾನಂತರ ನಮ್ಮ ತಾಯಿ ಸಣ್ಣಮ್ಮ ರವರ ಹೆಸರಿಗೆ ಎಂ.ಆರ್.ಹೆಚ್.-3/2012-2013 ರಂತೆ ದಾವಾ ಸ್ವತ್ತು ಪೌತಿ ಖಾತೆಯಾಯಿತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.81/4 ರ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ತಾಯಿ ಹೆಸರಿಗೆ ಪೌತಿ ಖಾತೆ ಆಗಿದೆ ಎಂದು ನುಡಿಯುತ್ತಾರೆ.

2) ಸರ್ವೆ ನಂ.81/2 ರ ಹೊಸ ನಂಬರ್ 81/4 ರಲ್ಲಿ 9 ಗುಂಟೆ ಮತ್ತು 80/3 ರಲ್ಲಿ 14 ಗುಂಟೆ ಎಂದರೆ ಸರಿ. ನಮ್ಮ ತಾಯಿ ಸಣ್ಣಮ್ಮ ರವರ ಹೆಸರಿನಲ್ಲಿ ಆದಂತಹ ಪೌತಿ ಖಾತೆ ಯನ್ನು ಪ್ರಶ್ನಿಸಿ 1 ನೇ ಪ್ರತಿವಾದಿಯು ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ರಾಮನಗರ ಪ್ರಕರಣ ಸಂಖ್ಯೆ ಆರ್.ಎ. 60/2017-2018 ರಂತೆ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ಪ್ರಕರಣವು 1 ನೇ ಪ್ರತಿವಾದಿ ಪರ ಆದೇಶವಾಯಿತು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದ ಪ್ರಕಾರ ನಮ್ಮ ತಾಯಿಯ ಹೆಸರಿನಲ್ಲಿ ಇದ್ದಂತಹ ಪೌತಿ ಖಾತೆಯನ್ನು ರದ್ದು ಪಡಿಸಲಾಯಿತು ಎಂದರೆ ಸರಿ. ನಂತರ ಮತ್ತೆ ಸದರಿ ಪ್ರಕರಣವನ್ನು ತಹಶೀಲ್ದಾರ್ ರವರ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲಾಯಿತು ಎಂದರೆ ಸರಿ.

3) ಸದರಿ ಪ್ರಕರಣದ ವಿಚಾರವಾಗಿ ನಾನು ತಹಶೀಲ್ದಾರ್ ರವರ ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ. ಆರ್ ಆರ್.ಟಿ(ಡಿಸ್) 154/2017-18 ರ ಪ್ರಕರಣದಲ್ಲಿ 1 ನೇ ಪ್ರತಿವಾದಿಯ ತಂದೆ ಹೆಸರಿಗೆ ಖಾತೆ ದಾಖಲು ಮಾಡಲು ದಿಃ 07.03.2018 ಆದೇಶ ಮಾಡಲಾಯಿತು ಎಂದರೆ ಸರಿ. ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ರಾಮನಗರ ರವರ ಆದೇಶದ ಮೇರೆಗೆ ದಿಃ20.07.2018 ರಂದು ತಹಶೀಲ್ದಾರ್ ರವರಿಗೆ 1 ನೇ ಪ್ರತಿವಾದಿಯು ಖಾತೆ ದಾಖಲು ಮಾಡಲು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನನ್ನ ತಾಯಿ ಸಣ್ಣಮ್ಮ ರವರ ಹೆಸರಿನಲ್ಲಿ ಇದ್ದ ಖಾತೆಯನ್ನು ರದ್ದು ಪಡಿಸಿ 1 ನೇ ಪ್ರತಿವಾದಿ ಹೆಸರಿಗೆ ಖಾತೆ ಮಾಡಲು ಅರ್ಜಿ ನೀಡಿದ್ದರು ಎಂದರೆ ಗೊತ್ತಿಲ್ಲ. ನಮ್ಮ ತಾಯಿಯ ಹೆಸರಿನಲ್ಲಿ ಇದ್ದಂತಹ ಖಾತೆ ರದ್ದಾದ ನಂತರವೂ ಸಹ ನಾವು ದಿಃ05.07.2018 ರಂದು ಕಾನೂನು ಬಾಹಿರವಾಗಿ ನಮ್ಮ ನಡುವೆ ವಿಭಾಗ ಪತ್ರವನ್ನು ತಯಾರು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ಸರ್ವೆ ನಂ.81/2 ರ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿದ್ದು ಸದರಿ ಸ್ವತ್ತಿನ ಖಾತೆಯು ಬೇರೆಯವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ.

4) ತಹಶೀಲ್ದಾರ್ ರವರು ಹೊರಡಿಸಿರುವ ಆದೇಶವನ್ನು ಇದುವರೆವಿಗೂ ನಾನು ಓದಿ ತಿಳಿದುಕೊಂಡಿಲ್ಲ. ಆರ್ ಆರ್.ಟಿ(ಡಿಸ್) 154/2017-18 ರ ಆದೇಶದಲ್ಲಿ ಹಳೆ ಸರ್ವೆ ನಂ.81/2 ಪೋಡಿ ದುರಸ್ತಿಯಾಗಿ ಹೊಸ ಸರ್ವೆ ನಂ.80/3 ಮತ್ತು 81/4 ನಮೂದಾಗಿ ಬದಲಾಗಿರುತ್ತದೆ ಎಂದರೆ ಸಾಕ್ಷಿ ಆದೇಶವಾಗಿದೆ ಆದರೆ ಪೋಡಿ ಆಗಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಾಯಿ ಹೆಸರಿನಲ್ಲಿ ಖಾತೆ ಇಲ್ಲದೇ ಇದ್ದರೂ ಸಹ ಕಾನೂನು ಬಾಹಿರವಾಗಿ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ವಿಭಾಗ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಕಾನೂನಿನ ಪ್ರಕಾರವೇ ವಿಭಾಗ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿದ ದಿನದಿಂದಲೂ ಸ್ವಾಧೀನದಲ್ಲಿದ್ದು ಅನುಭವಿಸಿಕೊಂಡು ಬೇಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲು ನಮ್ಮ ದೊಡ್ಡಪ್ಪನವರು ಸ್ವಾಧೀನದಲ್ಲಿ ಇದ್ದರು ಅವರ

ಮರಣಾನಂತರ ನಾವೇ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿ ಸರ್ವೆ ನಂ.81/5 ರಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿರುವುದು, ನಾವು ಸರ್ವೆ ನಂ.81/4 ಮತ್ತು 80/3 ರಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದೇವೆ. ಈ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸರ್ವೆ ನಂ.81/2 ಹಾಗೂ ದಾವಾ ಸ್ವತ್ತಿನ ಸರ್ವೆ ನಂಬರ್ ಎರಡೂ ಸಹಾ ಒಂದೇ ನಂಬರ್ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎರಡೂ ಬೇರೆ ಬೇರೆ ಸ್ವತ್ತಿನ ಸರ್ವೆ ನಂಬರ್ ಗಳು ಎಂದು ನುಡಿಯುತ್ತಾರೆ.

5) ನಮ್ಮ ತಂದೆ ಹೆಸರಿನಲ್ಲಿ ಸರ್ವೆ ನಂ.81/4 ಮತ್ತು 80/3 ಸ್ವತ್ತುಗಳು ಇತ್ತು ಎಂದು ತೋರಿಸಲು ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನೀವು ಹಾಜರುಪಡಿಸಿರುವ ಸರ್ವೆ ನಂ.81/4 ಮತ್ತು 80/3 ರ ಪಹಣಿ ಪತ್ರಿಕೆಗಳು 2018 ನಂತರ ದ ದಾಖಲಾತಿಗಳು ಎಂದರೆ ಸರಿಯಲ್ಲ. ನಮ್ಮ ತಾತ ಕಾಶೀ ಮೋಟಾ ನಮ್ಮ ತಂದೆ ತಿಮ್ಮಾಬೋವಿ ರವರ ಹೆಸರಿನಲ್ಲಿದ್ದ ಕೈಬರಹದ ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯವರೇ ಹಕ್ಕುದಾರರು ಮತ್ತು ಮಾಲೀಕರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ